ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ
SRI GURU RAGHAVENDRA SAHAKARA BANK NIYAMITHA
# 15, Subbarama Chetty Road, Nettakallappa Circle, Basavanagudi, Bangalore - 560 004.
Phone : 26620380, 26620379 ■ Fax : 080-26506895 ■ E-mail : sgrsbn.bank@gmail.com
Website : www.raghavendrabank.com

SGRSBN/OR/1748/2021-22 Date : 22-10-2021

**FAQ / ಎಫ್.ಎ.ಕ್ಯೂ**

1) ವಿಮಾ ಕ್ಲೈಮನ್ನು "ಅದೇ ಹಕ್ಕು ಮತ್ತು ಅದೇ ಸಾಮರ್ಥ್ಯ" ದ ಆಧಾರದ ಮೇಲೆ ಸಂದಾಯ ಮಾಡಲಾಗುವುದು, ಗ್ರಾಹಕ ಸಂಖ್ಯೆಯ ಆಧಾರದ ಮೇಲಲ್ಲ. ಡಿ.ಐ.ಸಿ.ಜಿ.ಸಿ ಮಾರ್ಗಸೂಚಿಯಲ್ಲಿರುವಂತೆ ಅರ್ಜಿದಾರನು ಖಚಿತಪಡಿಸಿ ತನ್ನ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ವಿವರವನ್ನು ಈ ಕೆಳಗಿನ ಲಿಂಕ್‌ನಲ್ಲಿ ಕಾಣಬಹುದು / The claims are settled on the basis of same right & same capacity and not on the basis of Different Customer IDs. The claimant should be guided as per DICGC guidelines by visiting DICGC link https://www.dicgc.org.in/FD_A-GuideToDepositInsurance.html#q10.

2) ಠೇವಣಿದಾರರಿಂದ ಸಹಿಯಾದ ಸಮ್ಮತಿ ಪತ್ರವನ್ನು ಸಲ್ಲಿಸದ ಹೊರತು ಯಾವುದೇ ಬಾಕಿ ಉಳಿದಿರುವ ಠೇವಣಿಗಳ ಕ್ಲೈಮ್‌ನ್ನು ಡಿ.ಐ.ಸಿ.ಜಿ.ಸಿ ಸಂಸ್ಥೆಯು ಸ್ವೀಕರಿಸುವುದಿಲ್ಲ / No claim in respect of any outstanding deposit would be accepted by DICGC unless there is a signed willingness form is received from the Depositor.

3) ಅರ್ಜಿಯನ್ನು ಸಲ್ಲಿಸಲು ಅಥವಾ ದಾಖಲೆಗಳನ್ನು ಪ್ರಸ್ತುತ ಪಡಿಸಲು, ಹೊಂದಾಣಿಕೆಯಿಲ್ಲದ ಪ್ರಕರಣಗಳನ್ನು ಹೊರತುಪಡಿಸಿ ಮತ್ತಿತರ ಯಾವುದೇ ಪ್ರಕರಣಗಳಲ್ಲಿ ಠೇವಣಿದಾರರು ವ್ಯಕ್ತಿಗತವಾಗಿ ಬರುವ ಅಗತ್ಯವಿರುವುದಿಲ್ಲ / The physical presence of the Depositor is not insisted for submission of the claim form & presenting the documents except in cases where there are mismatches.

4) ಕ್ಲೈಮ್‌ನ್ನು ಡಿ.ಐ.ಸಿ.ಜಿ.ಸಿ ಸಂಸ್ಥೆಗೆ ದಿನಾಂಕ 01-09-2021ರಂತೆ ಬಡ್ಡಿ ಸಹಿತ ಖಾತೆಗಳ ಬಾಕಿ ಹಾಗೂ ವಿವರಗಳನ್ನು ಸಲ್ಲಿಸಲಾಗುವುದು ಹಾಗೂ ಇದಕ್ಕೆ ಸಂಬಂಧಿಸಿದ ಹೆಚ್ಚುವರಿ ಮಾಹಿತಿಯು ಡಿ.ಐ.ಸಿ.ಜಿ.ಸಿ ಜಾಲತಾಣದಲ್ಲಿನ ಸುತ್ತೋಲೆಗಳಲ್ಲಿ ದೊರೆಯುತ್ತದೆ / The claim will be submitted to DICGC with the details of accounts and Balance including interest as on the cut-off date i.e., 01-09-2021 and further details on timeline of payment can be verified from the DICGC circular posted on their website.

5) ಎಲ್ಲಾ ಠೇವಣಿಗಳ ವಿವರಗಳನ್ನು ಸಮ್ಮತಿ ಪತ್ರದಲ್ಲಿ ಒದಗಿಸತಕ್ಕದ್ದು, ಒಂದು ವೇಳೆ ಮೊದಲನೇ ಪುಟದಲ್ಲಿ ವಿವರಗಳನ್ನು ಭರ್ತಿ ಮಾಡಲು ಸ್ಥಳವಿಲ್ಲದಿದ್ದಲ್ಲಿ, ಅರ್ಜಿಯ ಹಿಂಭಾಗದಲ್ಲಿ ವಿವರಗಳನ್ನು ಒದಗಿಸಬಹುದು / All the Deposit details have to be furnished in the Willingness form & if there is no space in the front page, the details can be filled up in the reverse of the form.

6) ಠೇವಣಿ ಪತ್ರಗಳ ನಕಲು ಪ್ರತಿಯ ಅವಶ್ಯಕತೆಯಿರುವುದಿಲ್ಲ ಆದರೆ, ಎಲ್ಲಾ ಠೇವಣಿಗಳ ಸರಿಯಾದ ವಿವರಗಳನ್ನು ನಮೂದಿಸತಕ್ಕದ್ದು / Xerox copies of Deposit receipts are not required but the correct details of all Deposits have to be furnished.

7) ಕೆ.ವೈ.ಸಿ ದಾಖಲೆಗಳ ನಕಲು ಪ್ರತಿಯನ್ನು ಸಲ್ಲಿಸಬೇಕಾಗಿದೆ. ಸಮಂಜಸವಾದ ಕೆ.ವೈ.ಸಿ ದಾಖಲೆಗಳ ಪಟ್ಟಿಯು ಭಾರತೀಯ ರಿಸರ್ವ್ ಬ್ಯಾಂಕಿನ ಜಾಲತಾಣದಲ್ಲಿ ದೊರೆಯುವ ಸುತ್ತೋಲೆಯನ್ನು ಈ ಕೆಳಗಿನ ಲಿಂಕ್‌ನಲ್ಲಿ ಕಾಣಬಹುದು. ಹಾಗೂ ಮೂಲ ದಾಖಲೆಗಳನ್ನು ಬ್ಯಾಂಕಿನ ಸಿಬ್ಬಂದಿಗಳು ಪರಿಶೀಲಿಸಿ ಹಿಂದಿರುಗಿಸಲು ಪ್ರಸ್ತುತಪಡಿಸಬೇಕು / Xerox copies of KYC documents have to be submitted with the claim form. Originals to be presented for verification by Bank Staff & return. The valid KYC documents are listed in RBI Circular available at

https://rbi.org.in/Scripts/BS_ViewMasDirections.aspx?id=11566

8) ಕ್ಲೈಮ್ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು / Documents to be submitted with claim form.

SGRSBN/OR/1748/2021-22 Date : 22-10-2021

a) ಕೆ.ವೈ.ಸಿ ದಾಖಲೆಗಳ ನಕಲು ಪ್ರತಿ / Xerox copies of KYC documents.

b) ಪರ್ಯಾಯ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ಮೊದಲ ಪುಟದ ನಕಲು ಪ್ರತಿ ಅಥವಾ ರದ್ದುಗೊಳಿಸಿದ ಚೆಕ್ / Xerox copies of alternate Bank account passbook first page / Cancelled cheque leaf.

9) ಹೊರದೇಶದಲ್ಲಿರುವ ನಮ್ಮ ಬ್ಯಾಂಕಿನ ಠೇವಣಿದಾರರು ಮೊದಲು ಮಿಂಚಂಚೆಯ ಮೂಲಕ ಸಹಿಯಾದ ತಮ್ಮ ಸಮ್ಮತಿ ಪತ್ರಗಳನ್ನು ಕೆ.ವೈ.ಸಿ ದಾಖಲೆಗಳ ವಿದ್ಯುನ್ಮಾನ ಪ್ರತಿ (ಸಾಫ್ಟ್ ಕಾಪಿ)ಯನ್ನು ಕಳುಹಿಸಬಹುದು. ಹಾಗೂ ಅರ್ಜಿಯ ಕಾಯಂ ಪ್ರತಿ (ಹಾರ್ಡ್ ಕಾಪಿ)ಯನ್ನು ಕೆ.ವೈ.ಸಿ ಮೂಲ ದಾಖಲಾತಿಯೊಂದಿಗೆ (ಪರಿಶೀಲಿಸಿ ಹಿಂದಿರುಗಿಸಲು) ತಮ್ಮ ಅಧೀಕೃತ ವ್ಯಕ್ತಿಯ ಬಳಿ ದಿನಾಂಕ **30-10-2021**ರೊಳಗೆ ಬ್ಯಾಂಕಿಗೆ ಕಳುಹಿಸತಕ್ಕದ್ದು / The Customer's who are outside India, in the first instance can submit a soft copy of the signed willingness form along with KYC documents through email and present the hardcopy of the form with original documents (for verification and return) to the Bank through their authorized person at on or before 30-10-2021.

10) ಮೂಲ ದಾಖಲೆಗಳನ್ನು ಪ್ರಸ್ತುತಪಡಿಸಲು ಮರೆಯಬೇಡಿ. ಅವುಗಳನ್ನು ಪರಿಶೀಲಿಸಿ ಹಿಂದಿರುಗಿಸಲಾಗುವುದು / Do not forget to present the original KYC documents for verification & return.

11) ಹಕ್ಕುದಾರನು ಒಂದು ವೇಳೆ ಮರಣ ಹೊಂದಿದ್ದಲ್ಲಿ, ಆತನ ನಾಮಿನಿ ಅಥವಾ ಉತ್ತರಾಧಿಕಾರಿಯು ಅಗತ್ಯವಿರುವ ದಾಖಲಾತಿಗಳನ್ನು ಹಾಗೂ ಮರಣ ಪತ್ರವನ್ನು ಬ್ಯಾಂಕಿಗೆ ಸಲ್ಲಿಸಬೇಕು / In case where the claimants have expired, the claim form has to be submitted by nominee / legal heir with necessary documents & Death certificate.

12) ದಿನಾಂಕ 1ನೇ ಸೆಪ್ಟೆಂಬರ್ 2021ರಂತೆ ಠೇವಣಿದಾರರ ಮಾಹಿತಿಯನ್ನು ಕ್ಲೈಮ್‌ಗಾಗಿ ಡಿ.ಐ.ಸಿ.ಜಿ.ಸಿ ಗೆ ನೀಡಲಾಗುವುದು. ಆದ್ದರಿಂದ ಈಗಾಗಲೇ ಖಾತೆಯನ್ನು ಮುಕ್ತಾಯಗೊಳಿಸಿ ಇತರೆ ಖಾತೆಗೆ ವರ್ಗಾವಣೆ ಮಾಡಿಕೊಂಡಂತಹ ಖಾತೆಗಳನ್ನು (ನಾಮಿನಿ / ಉತ್ತರಾಧಿಕಾರಿಗಳ ಕ್ಲೈಮ್ ಸಹಿತ) ಒಂದೇ ಖಾತೆಯೆಂದು ಪರಿಗಣಿಸಿ "ಅದೇ ಹಕ್ಕು ಮತ್ತು ಅದೇ ಸಾಮರ್ಥ್ಯ"ದ ಅಡಿಯಲ್ಲಿ ಇತ್ಯರ್ಥಗೊಳಿಸಲಾಗುವುದು. 1st September 2021 will be considered as Cut-off Date for claims. Hence accounts which are already closed and transferred to any other account (including nominee / legal heirs claim) will be treated as single account and settled subject to same right & same capacity.

13) ಪಾಲುದಾರಿಕೆ ಸಂಸ್ಥೆ, ಕಂಪನಿ, ಟ್ರಸ್ಟ್ ಹಾಗೂ ಸೊಸೈಟಿಗಳಿಂದ "ಅದೇ ಹಕ್ಕು ಮತ್ತು ಅದೇ ಸಾಮರ್ಥ್ಯ"ದ ಅಡಿಯಲ್ಲಿ ಒಂದು ಸಂಸ್ಥೆಗೆ ಎಷ್ಟೇ ಪಾಲುದಾರರು, ನಿರ್ದೇಶಕರು / ಸದಸ್ಯರು ಇದ್ದರೂ, ಕೇವಲ ಒಂದು ಕ್ಲೈಮ್ ಅರ್ಜಿಯನ್ನು ನೀಡಬಹುದು. Legal entities like Partnership firms, Limited companies, Trust, Societies etc will be eligible for single claim under the same capacity & same right irrespective of number of partners / Directors / Members.

14) ಡಿ.ಐ.ಸಿ.ಜಿ.ಸಿ ಮಾರ್ಗಸೂಚಿಯಂತೆ "ಅದೇ ಹಕ್ಕು ಮತ್ತು ಅದೇ ಸಾಮರ್ಥ್ಯ" ಹಾಗೂ "ಬೇರೆ ಹಕ್ಕು ಮತ್ತು ಬೇರೆ ಸಾಮರ್ಥ್ಯ"ವನ್ನು ಅನುಬಂಧದಲ್ಲಿ ವಿವರಿಸಲಾಗಿದೆ ಮತ್ತು ಹೆಚ್ಚಿನ ಮಾಹಿತಿಗಾಗಿ ಡಿ.ಐ.ಸಿ.ಜಿ.ಸಿ ಜಾಲತಾಣವನ್ನು ವೀಕ್ಷಿಸಬಹುದು. The extract of DICGC guidelines on "Same right and same capacity" and "Different right & different capacity" is explained in the Annexure & depositors may visit DICGC website for more details.

ತಮ್ಮ ವಿಶ್ವಾಸಿ

(ಆರ್.ಅಶೋಕನ್)
ಆಡಳಿತಾಧಿಕಾರಿಗಳು